# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1490 (1573) |
| ಮಾನ್ಯ ಸದಸ್ಯರ ಹೆಸರು | ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 18-03-2026 |
| ಉತ್ತರಿಸುವ ಸಚಿವರು | ಉಪ ಮುಖ್ಯಮಂತ್ರಿ |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ದಕ್ಷಿಣ ತಾಲ್ಲೂಕು ಕೆಲವು ಗ್ರಾಮಗಳ ಸರ್ವೆ ನಂಬರ್‌ಗಳ ಸ್ಥಿರಾಸ್ತಿಗಳ ನೋಂದಣಿಯಲ್ಲಿ ಆಸ್ತಿಗಳ ಕಡಿಮೆ ಮೌಲ್ಯಮಾಪನ ಮಾಡಿ ನೋಂದಾಯಿಸಿರುವುದು ಹಾಗೂ ಗಂಗೇನಹಳ್ಳಿ, ವರ್ತೂರು, ನರಸೀಪುರ ಹಾಗೂ ಪದ್ಮನಪಾಳ್ಯ ಗ್ರಾಮದಲ್ಲಿ ಸರ್ಕಾರಿ ಜಮೀನಿಗೆ ನಕಲಿ ಮ್ಯೂಟೇಶನ್ ರಿಜಿಸ್ಟರ್ ಸೃಷ್ಟಿಸಿ ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಜಮೀನಿನ ಸಂಪೂರ್ಣ ಮಾಹಿತಿ ನೀಡುವುದು; ಈ ಕುರಿತು ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟವೆಷ್ಟು; | ಬೆಂಗಳೂರು ದಕ್ಷಿಣ ತಾಲ್ಲೂಕು ಕೆಲವು ಗ್ರಾಮಗಳ ಸರ್ವೆ ನಂಬರ್‌ಗಳ ಸ್ಥಿರಾಸ್ತಿಗಳ ನೋಂದಣಿಯಲ್ಲಿ ಆಸ್ತಿಗಳ ಕಡಿಮೆ ಮೌಲ್ಯಮಾಪನ ಮಾಡಿ ಯಾವುದೇ ದಸ್ತಾವೇಜುಗಳು ನೋಂದಣಿಯಾಗಿರುವುದಿಲ್ಲ.<br><br>ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಗಂಗೇನಹಳ್ಳಿ ಗ್ರಾಮವು ಜೋಡಿ ಗ್ರಾಮವಾಗಿದ್ದು ಸ.ನಂ.130ರಲ್ಲಿ ಸರ್ವೆ ದಾಖಲೆಯಂತೆ ಒಟ್ಟು 142-34 ಎ/ಗು ಜಮೀನಿರುತ್ತದೆ. ಈ ಪೈಕಿ ಶ್ರೀ ರಾಜ ಅಯ್ಯಂಗಾರ್ ಬಿನ್ ಎಸ್.ಶೇಷ ಅಯ್ಯಂಗಾರ್ ರವರಿಗೆ 40-00 ಎಕರೆ ಜಮೀನು ವಿಶೇಷ ಜಿಲ್ಲಾಧಿಕಾರಿಗಳ ಪ್ರಕರಣ ಸಂಖ್ಯೆ:44/59-60 ದಿನಾಂಕ:09-06-1967 ರಂತೆ ಮರು ಮಂಜೂರು ಮಾಡಿ ಆದೇಶಿಸಿರುತ್ತಾರೆ. ಶ್ರೀ ಆರ್.ಜಿ.ಶಾಮಣ್ಣ ಬಿನ್ ಗುಂಡುರಾವ್ |
| ಆ | ನಕಲಿ ಮ್ಯೂಟೇಶನ್ ರಿಜಿಸ್ಟರ್ ಸೃಷ್ಟಿಸಿ ಖಾತೆ ಮಾಡಿರುವ ಜಮೀನನ್ನು ಸರ್ಕಾರ ಹಿಂಪಡೆದುಕೊಂಡಿದೆಯೇ; ಹಿಂಪಡೆದಿದ್ದಲ್ಲಿ, ಜಮೀನನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ; ಹಿಂಪಡೆಯದಿದ್ದಲ್ಲಿ, ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದು; | ರವರಿಗೆ 65-00 ಎಕರೆ ಜಮೀನು ವಿಶೇಷ ಜಿಲ್ಲಾಧಿಕಾರಿಗಳ ಪ್ರಕರಣ ಕ್ರಮವಾಗಿ ಸಂಖ್ಯೆ:39/59-60 ಮತ್ತು 30/59-60 ದಿನಾಂಕ:09-06-1967 ರಂತೆ ಮರು ಮಂಜೂರು ಆದೇಶಿಸಿರುತ್ತಾರೆ. ಒಟ್ಟು 105-00 ಎಕರೆ ಜಮೀನು ಮರು ಮಂಜೂರಾಗಿರುತ್ತದೆ. ಮರು ಮಂಜೂರಾತಿಯಾಗಿರುವ ಜಮೀನನ್ನೊಳಗೊಂಡಂತೆ 65-29 ಎ/ಗು ಪೋಡಿಯಾಗಿ ಸ.ನಂ.175 ರಿಂದ 186 ರವರೆಗೆ ಹೊಸ ಸರ್ವೆ ನಂಬರ್‌ಗಳಾಗಿರುತ್ತದೆ. ಉಳಿದ 77-05 ಎ/ಗು ಖಾಯಂ ಇದ್ದು, ಸರ್ಕಾರಿ ಗೋಮಾಳದ ಜಮೀನಾಗಿರುತ್ತದೆ. |
| ಇ | ನಕಲಿ ಮ್ಯೂಟೇಶನ್ ರಿಜಿಸ್ಟರ್ ಸೃಷ್ಟಿಸಿರುವ ಮತ್ತು ಕಡಿಮೆ ಮೌಲ್ಯಮಾಪನ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳು ಯಾರು; ಅವರುಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು? (ಸಂಪೂರ್ಣ ವಿವರ ನೀಡುವುದು) | ನಂತರ ಸದರಿ ಜಮೀನನ್ನು ಶ್ರೀ ರಾಜ ಅಯ್ಯಂಗಾರ್ ರವರಿಂದ ಶ್ರೀ ಸಾವಿತ್ರಿದೇವಿ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್ ರವರಿಗೆ 40-00 ಎಕರೆ ವಿಸ್ತೀರ್ಣದ ಜಮೀನನ್ನು ನೋಂದಣಿ ಕ್ರಯ ಪತ್ರ ಸಂಖ್ಯೆ:3359, ದಿನಾಂಕ:04-01-1971 ರಂತೆ ಕ್ರಯವಾಗಿರುತ್ತದೆ. ಶ್ರೀ ಆರ್.ಜಿ.ಶಾಮಣ್ಣ ಬಿನ್ ಗುಂಡುರಾವ್ ರವರು ಶ್ರೀ ಪದ್ಮನಾಭಯ್ಯ ರವರಿಗೆ 65-00 |

ಎಕರೆ ಜಮೀನನ್ನು ಮಾರಾಟ ಮಾಡಲಾಗಿರುತ್ತದೆ. ನಂತರ ಶ್ರೀ ಪದ್ಮನಾಭಯ್ಯ ರವರಿಂದ ನೋಂದಣಿ ಕ್ರಯ ಪತ್ರ ಸಂಖ್ಯೆ3362, ದಿನಾಂಕ:04-01-1971ರಂತೆ 65-00 ಎಕರೆ ಜಮೀನು ಶ್ರೀಮತಿ ಸಾವಿತ್ರಿದೇವಿ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್‌ರವರ ಹೆಸರಿಗೆ ಕ್ರಯವಾಗಿರುತ್ತದೆ.

ಹಾಲಿ ಪಹಣಿ ಕಾಲಂ 3 ರಲ್ಲಿ ಒಟ್ಟು 77-05 ಎ/ಗು ವಿಸ್ತೀರ್ಣದ ಜಮೀನಿದ್ದು, ಇದರಲ್ಲಿ ಸರ್ಕಾರ 8-00 ಎಕರೆ ಸರ್ಕಾರಿ 57-00 ಎಕರೆ ಮತ್ತು ಶ್ರೀಮತಿ ಸಾವಿತ್ರಿ ದೇವಿ ಚೌಧರಿ ಟ್ರಸ್ಟ್ ರವರಿಗೆ ಎಂ.ಆರ್.ಡಿ. 10/16-17 ರಂತೆ 12-05 ಎ/ಗು ಖಾತೆ ದಾಖಲಾಗಿರುತ್ತದೆ.

ವಡೂರು ಮತ್ತು ನರಸೀಪುರ ಗ್ರಾಮದಲ್ಲಿ ಯಾವುದೇ ಸರ್ಕಾರಿ ಜಮೀನು ಇರುವುದಿಲ್ಲ.

ಪೆದ್ದನಪಾಳ್ಯ ಗ್ರಾಮ ಸ.ನಂ.6 ಮೂಲತಃ ಸರ್ಕಾರಿ ಗೋಮಾಳದ ಜಮೀನಾಗಿದ್ದು, ಮೂಲ ಆಕಾರ್‌ಬಂದಿನಂತೆ 29-22 ಎ/ಗು ಜಮೀನಿದ್ದು, ಈ ಪೈಕಿ 12-08 ಎ/ಗು ಪೋಡಿಯಾಗಿ ಹೊಸ ಸ.ನಂ.37 ರಿಂದ 43 ರಂತೆ ದಸ್ತಾಗಿರುತ್ತದೆ. ಎಂ.ಆರ್.ಟಿ 20/07-08 ರಂತೆ 2-00 ಎಕರೆ ಜಮೀನು ಮಂಜೂರಿದಾರರಿಂದ ಶ್ರೀ ಸಿ.ರಂಗಯ್ಯ ಉರುಫ್ ರಂಗಸ್ವಾಮಿ ಬಿನ್ ಲೇಟ್ ಚನ್ನಪ್ಪ ಮತ್ತು ಶ್ರೀ ಸಿ.ಸೋಮಶೇಖರ್ ಬಿನ್ ಲೇಟ್ ಚನ್ನಪ್ಪ ರವರಿಗೆ ಜಂಟಿಯಾಗಿ ಖಾತೆ ದಾಖಲಾಗಿರುತ್ತದೆ. ಎಂ.ಆರ್.ಟಿ. 15/19-10 (ತಹಶೀಲ್ದಾರ್ ರವರ ಆದೇಶ ಸಂಖ್ಯೆ: LND RUC CR 1205/91-92 ದಿನಾಂಕ:20-02-2009) ರಂತೆ 1-05 ಎ/ಗು ಶ್ರೀ ಮುನಿಯಪ್ಪ ಬಿನ್ ಪಾಪಣ್ಣ ರವರಿಗೆ ಖಾತೆ ದಾಖಲಾಗಿರುತ್ತದೆ. ವಿಶೇಷ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಕಾರ್ಯಾಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಎಲ್‌ಎನ್‌ಡಿ(ಎಸ್)ಸಿಆರ್:128/21-22 ರಂತೆ 2-00 ಎಕರೆ ಸಾರ್ವಜನಿಕ ಸ್ಮಶಾನಕ್ಕೆ ಹಾಗೂ ಎಲ್‌ಎನ್‌ಡಿ(ಎಸ್)ಸಿಆರ್:293/03-04 ರಂತೆ 5-00 ಎಕರೆ ಆಶ್ರಯ ಯೋಜನೆಗೆ ಕಾಯ್ದಿರಿಸಲಾಗಿರುತ್ತದೆ. ಉಳಿಕೆ 7-09 ಎ/ಗು ವಿಸ್ತೀರ್ಣದಲ್ಲಿ ಮಂಜೂರಾತಿಯಾಗಿರುವುದಾಗಿ ರೈತರು ಸಾಗುವಳಿ ಮಾಡಿಕೊಂಡು ಅನುಭವದಲ್ಲಿದ್ದು, ಸದರಿ 7-09 ಎ/ಗು ಹಾಗೂ ಆಶ್ರಯ ಯೋಜನೆಗೆ ಕಾಯ್ದಿರಿಸಲಾಗಿರುವ 5-00 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ವಿಶೇಷ ಜಿಲ್ಲಾಧಿಕಾರಿಗಳು-2 ಬೆಂಗಳೂರು ದಕ್ಷಿಣ ಉಪವಿಭಾಗ ರವರ ನ್ಯಾಯಾಲಯದಲ್ಲಿ ಪ್ರಕರಣ

| | | |
|---|---|---|
| | | ಸಂಖ್ಯೆ: ಆರ್‌ಆರ್‌ಟಿ(2) (ಎಸ್)ಸಿಆರ್:02/16-17 ಮತ್ತು ಆರ್‌ಆರ್‌ಟಿ(2)(ಎಸ್)ಸಿಆರ್:46/24-25 ರಂತೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ತಹಶೀಲ್ದಾರ್, ಬೆಂಗಳುರು ದಕ್ಷಿಣ ತಾಲ್ಲೂಕು ರವರಿಗೆ ಮಂಜೂರಾತಿಯನ್ನು ರದ್ದುಗೊಳಿಸಲು ಕ್ರಮ ವಹಿಸುವಂತೆ ದಿನಾಂಕ:17-07-2025 ರಂದು ಆದೇಶಿಸಲಾಗಿರುತ್ತದೆ. ಅದರಂತೆ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 104ರ ಮೇರೆಗೆ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸ್ ನೀಡಿರುವ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣದ ಸಂಖ್ಯೆ: ಡಬ್ಲ್ಯೂಪಿ:34460/2025 ರಂತೆ ಪ್ರಕರಣ ದಾಖಲಾಗಿದ್ದು, ಪ್ರಕರಣ ವಿಚಾರಣಾ ಹಂತದಲ್ಲಿದ್ದು, ಪ್ರಸ್ತುತ ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ.<br><br>ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯ ಗಂಗೇನಹಳ್ಳಿ, ವರ್ತೂರು, ನರಸೀಪುರ ಹಾಗೂ ಪೆದ್ದನಪಾಳ್ಯ ಗ್ರಾಮದಲ್ಲಿ ಸರ್ಕಾರಿ ಜಮೀನಿಗೆ ನಕಲಿ ಮ್ಯುಟೇಷನ್ ರಿಜಿಸ್ಟರ್ ಸೃಷ್ಟಿಸಿ ಖಾತೆ ಮಾಡಿರುವುದು ಕಂಡು ಬಂದಿರುವುದಿಲ್ಲ. |

ಕಂಇ/86/ಎಂಎನ್‌ಎಸ್‌ವಿ/2026

(ಡಾ: ಜಿ.ಪರಮೇಶ್ವರ್)
ಉಪ ಮುಖ್ಯಮಂತ್ರಿ
ಕಂದಾಯ ಇಲಾಖೆ